ಕೆಲವರ ಮನೆಯಲ್ಲಿ ಅಡುಗೆಕಟ್ಟೆಯ ಮೇಲೆ ಚಿಕ್ಕದಾದ ಒರಳುಕಲ್ಲನ್ನು ಅಳವಡಿಸಿ ನಿಂತುಕೊಂಡೇ ರುಬ್ಬುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ.

ಹಳೆಯ ಸಿನಿಮಾಗಳನ್ನು ನೋಡಿದ ನೆನಪಿದ್ದರೆ... ಒಬ್ಬ(ಸಾಮಾನ್ಯವಾಗಿ ಹಾಸ್ಯನಟ) ಹೋಟೆಲ್‌ಗೆ ಹೋಗಿ ಗಡದ್ದಾಗಿ ತಿಂಡಿ/ಊಟ ತಿಂದು, ತಿಂದ ತಿಂಡಿ/ಊಟಕ್ಕೆ ಕೊಡಲು ಆ ವ್ಯಕ್ತಿಯ ಬಳಿ ದುಡ್ಡು ಇಲ್ಲದಾದಾಗ, ಗಲ್ಲಾಪೆಟ್ಟಿಗೆಯ ಬಳಿ ಕುಳಿತಿದ್ದ ಮ್ಯಾನೇಜರ್ ಆ ವ್ಯಕ್ತಿಯನ್ನು ಹಿಟ್ಟು ರುಬ್ಬಲು ಕಳಿಸುತ್ತಿದ್ದ. ಅವನು ಒರಳುಕಲ್ಲಿನಲ್ಲಿ ದೋಸೆಗೋ ಇಡ್ಲಿಗೋ ಹಿಟ್ಟು ರುಬ್ಬುತ್ತಾ ಮೈ–ಕೈ, ಮುಖಕ್ಕೆಲ್ಲಾ ಹಿಟ್ಟು ಮೆತ್ತಿಕೊಂಡು ಹಿಟ್ಟಿನ ಗೊಂಬೆಯಂತಾಗುತ್ತಿದ್ದ! ಜ್ಞಾನಸಿಂಧುವಿನಲ್ಲಿ 'ಇಟ್ಟು ತಲೆ ಒರಳೊಳಗೆ ಒನಕೆಯ ಪೆಟ್ಟು ತಪ್ಪಿಸಿಕೊಂಬುದೆಂತೈ' ಎಂದಂತೆ, ತಿಂದ ತಿಂಡಿಯ ದುಡ್ಡಿಗೆ ಸಮವಾಗಿ ಆತ ಹಿಟ್ಟು ರುಬ್ಬಲೇಬೇಕಿತ್ತು. ಅದಕ್ಕೆ ವಿನಾಯಿತಿ ಇರುತ್ತಿರಲಿಲ್ಲ. ಹಾಗೆಯೇ ಖಳನಾಯಕ 'ಗುಂಡುಕಲ್ಲು ಎತ್ತಾಕಿಬಿಡ್ತೀನಿ ನೋಡು' ಎಂದು ಹೆದರಿಸುವ ಡೈಲಾಗ್ ಹೇಳುತ್ತಿದ್ದುದೂ ಉಂಟು. ಮೋಸಹೋದ ಪಾಪದ ಜನ 'ಅವ್ನು ನನ್ನ ತಲೆ ಮೇಲೆ ಕಾರ ಅರೆದ' ಎಂದು ತಲೆಯ ಮೇಲೆ ಕೈಯಾಡಿಸುತ್ತಾ, ಬಾಯ್ಬಾಯಿ ಬಡ್ಕೊಂಡು ಅಳುವ ದೃಶ್ಯಗಳೂ ಇರುತ್ತಿದ್ದವು.

ಉಪನಯನ, ಮದುವೆ ಸಮಾರಂಭಗಳಿದ್ದಲ್ಲಿ ಮೊದಲು ಮನೆಯಲ್ಲಿ ಎಣ್ಣೆಶಾಸ್ತ್ರದ ಅನಂತರ

